**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/1007/2017/ARE-14

Multi Storied Building,
Dr. B.R. Ambedkar Veedhi,
Bengaluru-560 001
Date: **30/11/2021**

## RECOMMENDATION

Sub:- Departmental inquiry against;
(1) Sri Annappa Kudari, Assistant Executive Engineer,
(2) Sri Shyamsundar Saranad, Junior Engineer,
Both of Public Works Department, Afzalpur Sub Division, Kalaburagi District – Reg.

Ref:- 1) Govt. Order No. **ಲೋಇ 301 ಸೇಇವಿ 2017**, Bengaluru dated 4/9/2017.

2) Nomination order No.UPLOK-1/DE/1007/2017, Bengaluru dated 11/9/2017 of Upalokayukta-1, State of Karnataka, Bengaluru

3) Inquiry Report dated 29/11/2021 of Additional Registrar of Enquiries-14, Karnataka Lokayukta, Bengaluru

----

The Government by its order dated 4/9/2017 initiated the disciplinary proceedings against (1) Sri Annappa Kudari, Assistant Executive Engineer and (2) Sri Shyamasundar Saranad, Junior Engineer – both of Public Works Department, Afzalpur Sub Division, Kalaburagi District (hereinafter referred to as Delinquent Government Officials 1 & 2, for short as DGO-1 and DGO-2) and entrusted the Departmental Inquiry to this Institution.

2. This Institution by Nomination Order No.UPLOK-1/DE/1007/2017 Bengaluru dated 11/9/2017 nominated Additional Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs 1 & 2 for the alleged charge of misconduct, said to have been committed by them. Subsequently, by Order No.UPLOK-

1&2/DE/Transfers/2018 dated 6/8/2018, the Additional Registrar of Enquiries-14, Karnataka Lokayukta, Bengaluru was re-nominated as inquiry officer to conduct departmental inquiry against DGOs 1 & 2.

3. The DGO-1 Sri Annappa Kudari, Assistant Executive Engineer and DGO-2 Sri Shyamasundar Saranad, Junior Engineer – both of Public Works Department, Afzalpur Sub Division, Kalaburagi District were tried for the following charges:-

> "That, you DGO No.1-Annappa Kudari, Assistant Executive Engineer, PWD Sub Division, Afzalpur, Kalaburagi District and DGO No.2-Shamasundar Saranad, Junior Engineer, PWD Sub Division, Afzalpur, Kalaburagi District have committed the following misconduct :-
>
> The construction of road from Shiruvala to Dudani K.M. 10 to 14.70 (working reach from K.M. 9.30 to 10.00 and K.M. 11.50 to 14.20) along with two C.D. works taken up under NABARD-RIDF-19 Scheme for the year 2013-14 is of substandard quality and as per I.O.s observation (1)The M.B. book, measurements have been recorded on a single day i.e., on 25.11.2014, 19.01.2015 only for the purpose of passing bills. There is no regular supervision of work and recording of measurements at various stages of work. (2) In the M.B. Book recorded with respect to running account bill, RA 1st and part & RA 2nd and part, for some of the items, the measurements are stated to be recorded at page no.103 and 104 of M.B. 7206. No such M.B. Book is produced by the respondents. (3) In the M.B. Book with respect to

running account bill RA 3rd and part and RA 4th and part, date of recording the measurements is not mentioned. (4) The respondents who have signed the bill have not mentioned the date on which they have signed the bill.

Further, the I.O. states that the defect liability period is for two years up to May -2017. The work is stated to be completed on 20.05.2015. The letter dated: 20.01.2017 is produced showing that the contractor who had executed the work is called upon to rectify the defects/damages to the alleged road. Two letters of similar kind dated: 10.12.2016 and 31.12.2016 is noted in the reference of the said letter. This shows that up to December 2016 the respondents have not called the contractor to rectify the defects/damages caused to the alleged road immediately.

Thus, you DGO No.1 & 2, being Government/public servants have failed to maintain absolute integrity and devotion to duty and acted in a manner unbecoming of Government servants and thus, you have committed misconduct U/Rule 14-A of the Karnataka Civil Services (Classification, Control and Appeal) Rules, 1957."

4. The Inquiry Officer (Additional Registrar of Enquiries-14) on proper appreciation of oral and documentary evidence has held that the Disciplinary Authority has proved the above charges against DGO-1 Sri Annappa Kudari, Assistant Executive Engineer and DGO-2 Sri Shyamasundar Saranad, Junior Engineer – both of Public Works Department, Afzalpur Sub Division, Kalaburagi District.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGOs 1 & 2;

(i) DGO-1 Sri Annappa Kudari is due to retire from service on 31/7/2023;

(ii) DGO-2 Sri Shyamsundar Saranad is due to retire from service 31/7/2028

7. Having regard to the nature of charges proved against DGO-1 Sri Annappa Kudari, Assistant Executive Engineer and DGO-2 Sri Shyamasundar Saranad, Junior Engineer – both of Public Works Department, Afzalpur Sub Division, Kalaburagi District, it is hereby recommended to the Government for imposing penalty of;

(i) Withholding one annual increment payable to DGO-1 Sri Annappa Kudari with cumulative effect;

(ii) Withholding one annual increment payable to DGO-2 Sri Shyamsundar Saranad with cumulative effect.

8. Action taken in the matter shall be intimated to this Authority.

Connected records are enclosed herewith.

30/11/21

**(JUSTICE B.S.PATIL)**
Upalokayukta,
State of Karnataka,
Bengaluru

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ-1007/2017/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 29/11/2021.

## ವಿಚಾರಣಾ ವರದಿ

**ಉಪಸ್ಥಿತರು:** **ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರರಾದ (1) ಶ್ರೀ. **ಅಣ್ಣಪ್ಪ ಕುದರಿ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಉಪವಿಭಾಗ, ಅಫಜಲ್‌ಪುರ, ಕಲಬುರಗಿ ಜಿಲ್ಲೆ ಮತ್ತು (2) ಶ್ರೀ. **ಶ್ಯಾಮಸುಂದರ್ ಸರನದ,** ಕಿರಿಯ ಅಭಿಯಂತರರು, ಲೋಕೋಪಯೋಗಿ, ಉಪವಿಭಾಗ, ಅಫಜಲ್‌ಪುರ, ಕಲಬುರಗಿ ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/865/2015/ಡಿಆರ್‌ಇ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 31/07/2017.
2. ಸರ್ಕಾರದ ಆದೇಶ ಸಂಖ್ಯೆ: ಲೋಇ 301 ಸೇಇವಿ 2017, ಬೆಂಗಳೂರು ದಿನಾಂಕ: 04/09/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/1007/2017, ಬೆಂಗಳೂರು ದಿನಾಂಕ: 11/09/2017.
4. Order No.UPLOK-1&2/DE/Transfers/2018 Bengaluru, Dated: 06/08/2018 file is transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ ಶ್ರೀ. **ಸಂತೋಷ್ ಟಿ. ದೊಡ್ಡಮನಿ,** ತಾಲ್ಲೂಕು ಪ್ರೆಸಿಡೆಂಟ್, ಪಂಚಶೀಲನಗರ, ಅಫಜಲಪುರ ತಾಲ್ಲೂಕು ರವರು ಆಪಾದಿತ ಸರ್ಕಾರಿ ನೌಕರರಾದ (1) ಶ್ರೀ. **ಅಣ್ಣಪ್ಪ ಕುದರಿ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ

ಇಲಾಖೆ, ಉಪವಿಭಾಗ, ಅಫಜಲಪುರ ಮತ್ತು (2) ಶ್ರೀ. **ಶ್ಯಾಮಸುಂದ ಸರನದ,** ಕಿರಿಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಪವಿಭಾಗ, ಅಫಜಲಪುರ ಇವರುಗಳ ವಿರುದ್ಧ ದೂರು ಸಲ್ಲಿಸಿದ್ದು ಇರುತ್ತದೆ. ದೂರಿನಲ್ಲಿ 2013-14ನೇ ಸಾಲಿನಲ್ಲಿ ನಬಾರ್ಡ್ ಆರ್‌ಐಡಿಎಫ್-19ರಡಿ ಕೈಗೊಳ್ಳಲಾದ ಶಿರುವಲದಿಂದ ದೂಡನಿ ರಸ್ತೆ ಕಿ.ಮೀ. 10.00 ರಿಂದ 14.70 ರವರೆಗೆ (ಕಾಮಗಾರಿ ಸರಪಳಿ 9.30 ರಿಂದ 10.00 ರವರೆಗೆ ಮತ್ತು 11.50 ರಿಂದ 14.20 ರವರೆಗೆ) ರಸ್ತೆ ನಿರ್ಮಾಣ ಕಾಮಗಾರಿ ಹಾಗೂ ಎರಡು ಚರಂಡಿ ನಿರ್ಮಾಣ ಕಾಮಗಾರಿಗಳನ್ನು ಕಳಪೆ ಗುಣಮಟ್ಟದಿಂದ ನಿರ್ವಹಿಸಿರುವುದಾಗಿ ದುರ್ವತನೆ/ದುರ್ನಡತೆ ಕಂಡು ಬಂದಿರುತ್ತದೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿದಂತೆ, ದಿನಾಂಕ: 04/09/2017ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 11/09/2017 ರಂದು ಅಪರ ನಿಬಂಧಕರು, ವಿಚಾರಣೆಗಳು-7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌಕರರಾದ** (1) ಶ್ರೀ. **ಅಣ್ಣಪ್ಪ ಕುದರಿ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪವಿಭಾಗ, ಅಫಜಲಪುರ ಮತ್ತು (2) ಶ್ರೀ. **ಶ್ಯಾಮಸುಂದ ಸರನದ,** ಕಿರಿಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಪವಿಭಾಗ, ಅಫಜಲಪುರ ಇವರುಗಳ **ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು

ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 06/08/2020 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ-1**

**ದೋಷಾರೋಪಣೆ**

1. That, you DGO No.1-Annappa Kudari, Assistant Executive Engineer, PWD Sub Division, Afzalpur, Kalaburgi District and DGO No.2-Shamasundar Saranad, Junior Engineer, PWD Sub Division, Afzalpur, Kalaburgi District have committed the following misconduct :-

   The construction of road from Shiruvala to Dudani K.M. 10 to 14.70 (working reach from K.M. 9.30 to 10.00 and K.M. 11.50 to 14.20) along with two C.D. works taken up under NABARD-RIDF-19 Scheme for the year 2013-14 is of substandard quality and as per I.O.s observation (1)The M.B. book, measurements have been recorded on a single day i.e, on 25.11.2014, 19.01.2015 only for the purpose of passing bills. There is no regular supervision of work and recording of measurements at various stages of work. (2) In the M.B. Book recorded with respect to running account bill, RA 1st and part & RA 2nd and part, for some of the items, the measurements are stated to be recorded at page no.103 and 104 of M.B. 7206. No such M.B.

Book is produced by the respondents. (3) In the M.B.Book with respect to running account bill RA 3rd and part and RA 4th and part, date of recording the measurements is not mentioned. (4) The respondents who have signed the bill have not mentioned the date on which they have signed the bill.

Further, the I.O. states that the defect liability period is for two years upto May -2017. The work is stated to be completed on 20.05.2015. The letter dated: 20.01.2017 is produced showing that the contractor who had executed the work is called upon to rectify the defects/damages to the alleged road. Two letters of similar kind dated: 10.12.2016 and 31.12.2016 is noted in the reference of the said letter. This shows that upto December 2016 the respondents have not called the contractor to rectify the defects/damages caused to the alleged road immediately.

Thus, you DGO No.1 & 2, being Government/public servants have failed to maintain absolute integrity and devotion to duty and acted in a manner unbecoming of Government servants and thus, you have committed misconduct U/Rule 14-A of the Karnataka Civil Services (Classification, Control and Appeal) Rules, 1957. Hence, this charge.

# ಅನುಬಂಧ–2

## ದೋಷಾರೋಪಣೆಯ ವಿವರ

An investigation was taken up under Section 9 of The Karnataka Lokayukta Act, on the basis of complaint filed by Shri. Santosh T.Doddamani, Taluk President, Panchasheela Nagar, Nandarga, Afzalpur Taluk, Kalaburgi District (hereinafter referred to as complainant for short) against DGO No.1- Sri Annappa Kudari, Assistant Executive Engineer, PWD Sub-Division, Afzalpur and DGO No.2- Sri Shamasundar Saranad, Junior Engineer, PWD Sub-Division, Afzalpur, Afzalpur Taluk, Kalaburgi District, Bidar District.

2. The complainant alleges that the construction of road from Shiruvala to Dudani K.M. 10 to 14.70 (working reach from K.M. 9.30 to 10.00 and K.M. 11.50 to 14.20) along with two C.D. works taken up under NABARD-RIDF-19 Scheme for the year 2013-14 is of substandard quality and the DGO No.1 & 2 have misappropriated the public funds.

3. The DGO No.1 & 2 have submitted similar comments by denying the allegations of substandard road work. By stating that only after quality certification at each and every stage from the Quality Control Division, the road

work has been executed & therefore have prayed to drop them from the proceedings.

4. The matter was referred for investigation to Chief Engineer, Technical Audit Cell, Karnataka Lokayukta, Bengaluru, who in turn has submitted report dated: 11.04.2017. The I.O. /Shri H.N.Srinivasamurthy, Assistant Executive Engineer-5 (I/c) by conducting spot inspection on 18.01.2017 has opined that the allegations of substandard work made in the complaint are not substantiated.

5. On perusal of the entire materials on record, the I.O. in the spot mahazar dated: 18.01.2017 has made the following observation;

ಕಾಮಗಾರಿಯ ಮೊದಲನೇ ರೀಚ್ ಅಂದರೆ 9.30 ಕಿ.ಮೀ. ನಿಂದ 10.00 ಕಿ.ಮೀ.ವರೆಗಿನ ರಸ್ತೆಯಲ್ಲಿ ಅನೇಕ ಸಣ್ಣ ಗುಂಡಿಗಳಿದ್ದು, ಕಿ.ಮೀ. 9.40, 9.65, 9.75 ಹಾಗೂ 9.85ಗಳಲ್ಲಿ ಗಣನೀಯವಾಗಿ ರಸ್ತೆಯಲ್ಲಿ ಗುಂಡಿಯಾಗಿರುವುದು ಕಂಡು ಬಂದಿರುತ್ತದೆ. . . . .

ಕಾಮಗಾರಿಯ ಎರಡನೇ ರೀಚ್ ಎಂದರೆ ಶಿರವಾಳ – ದೂಧನಿ ರಸ್ತೆಯ ಕ.ಮೀ. 11.50 ರಿಂದ ಕಿ.ಮೀ. 14.20 ಕಿ.ಮೀ.ವರೆಗಿನ ರಸ್ತೆಯಲ್ಲಿಯೂ ಕೂಡ ಅನೇಕ ಕಡೆಗಳಲ್ಲಿ ಗುಂಡಿ ಬಿದ್ದಿರುವುದು ಮತ್ತು ರಸ್ತೆಯು ಕುಸಿದಿರುವುದು ಕಂಡು ಬಂದಿರುತ್ತದೆ. ರಸ್ತೆಯ ಸವಕಳಿ 11.60 ಕಿ.ಮೀ. ನಲ್ಲಿ ಸಿ.ಡಿ. ನಿರ್ಮಿಸಿರುವುದು ಕಂಡು ಬಂದಿರುತ್ತದೆ. . . . . ಹೆಡ್ ವಾಲ್‌ಗಳ ಫಿನಿಷಿಂಗ್ ಕಾಮಗಾರಿ ಬಾಕಿಯಿರುತ್ತದೆ.

6. The I.O. in his report at photograph 4.02 has given the opinion as follows;

ಮಹಜರ್‌ನಲ್ಲಿ ದಾಖಲಿಸಿ, ಎದುರುದಾರರು ಕೂಡ ಒಪ್ಪಿ ಸಹಿ ಮಾಡಿರುವಂತೆ, ಪ್ರಸ್ತುತ ರಸ್ತೆಯ ಅನೇಕ ಗುಂಡಿಗಳಾಗಿರುವುದು ಮತ್ತು ಅನೇಕ ಕಡೆಗಳಲ್ಲಿ ರಸ್ತೆಯು ಕುಸಿದಿರುವುದು ಕಂಡು ಬಂದಿದ್ದು, ಮೇಲಿನ ಕಂಡಿಕೆಗಳಲ್ಲಿ ಈ ರೀತಿ ರಸ್ತೆಯು ಹಾಳಾಗಿರುವುದಕ್ಕೆ ಎದುರುದಾರರು ನೀಡಿರುವ ಕಾರಣಗಳಾದ

(ಅ) ಭೀಮಾ ನದಿಯಿಂದ ಮರಳು ಸಾಗಣೆಗೆ ಬಾರಿ ವಾಹನಗಳ ಚಲನೆ.

(ಆ) ಸುತ್ತಲ 6 ಸ್ಟೋನ್ ಕ್ರಷರ್‌ನಿಂದ ಜಲ್ಲಿ ಸಾಗಣೆಗೆ ಬಾರಿ ವಾಹನಗಳ ಚಲನೆ

(ಇ) ಹತ್ತಿರದ 3 ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಣೆಗೆ ಬಾರಿ ವಾಹನಗಳ ಚಲನೆ,

(ಈ) ರೈತರು ತಮ್ಮ ಜಮೀನಿಗೆ ನೀರಾವರಿ ಮಾಡಿಕೊಳ್ಳಲು ರಸ್ತೆಯನ್ನು ಅಗೆಯುವುದು,

ಇವುಗಳು ಸ್ವಲ್ಪ ಮಟ್ಟಿಗೆ ಕಾರಣವಾಗಿದ್ದರೂ, ಇವುಗಳೇ ಮುಖ್ಯ ಕಾರಣವೆಂದು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ –

Indian Road Congress Special Publication – 20 Rural Roads Manualನ 5.2.3 – Design Life ಪ್ಯಾರಾದಲ್ಲಿ ವಿವರಿಸಿರುವಂತೆ ಗ್ರಾಮೀಣ ಭಾಗದಲ್ಲಿ ಸಾಮಾನ್ಯವಾಗಿ ಅಳವಡಿಸುವ ತೆಳು ಡಾಂಬರ್ (Bituminous) ಪದರದ (ಪ್ರಸ್ತುತ ಪ್ರಕರಣದಲ್ಲಿ 25 ಮಿ.ಮೀ. ಎಸ್.ಡಿ.ಬಿ.ಸಿ.) ಆಯುಷ್ಯವು ಕನಿಷ್ಠ 5 ವರ್ಷವೆಂದು ಪರಿಗಣಿಸಬಹುದು ಎಂದು ತಿಳಿಸಿದ್ದು, ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡು ಒಂದು ವರ್ಷಕ್ಕೆ ಈ ರೀತಿ ಗುಂಡಿಗಳು ಬಿದ್ದಿದ್ದು, ರಸ್ತೆಯ ಹಲವು ಕಡೆ ಕುಸಿದಿರುತ್ತದೆ.

The said observations of the I.O. clearly go to reveal that the road is damaged within one year of its construction and therefore, it is to be inferred that the same is of substandard quality.

7. However, in spite of such observations made by him, the I.O. by stating that in view of the plying of heavy trucks transporting the sand from Bheema river, transporting crushed stones from the Stone Crushers, transporting sugar cane to the sugar factories and due to irrigated lands on both sides of the road, he has opined that there are possibilities of causing such damages to the road. The I.O. has reached his conclusion without any basis and only upon the oral assertion of the respondents. There are no such materials such as number of cases booked with respect to movement of over loaded trucks etc. Also there are no materials to show that the lands beside the road are irrigated all over the year. Under the circumstances, the report of I.O. cannot be accepted at this stage.

8. Apart from substandard work, the following discrepancies are also observed;
   - The M.B. book, measurements have been recorded on a single day i.e, on 25.11.2014, 19.01.2015 only for the purpose of passing bills. There is no regular supervision of work and recording of measurements at various stages of work.
   - In the M.B. Book recorded with respect to running account bill, RA 1st and part & RA 2nd and part, for some of the items, the

measurements are stated to be recorded at page no.103 and 104 of M.B. 7206. No such M.B. Book is produced by the respondents.

- In the M.B.Book with respect to running account bill RA 3rd and part and RA 4th and part, date of recording the measurements is not mentioned.
- The respondents who have signed the bill have not mentioned the date on which they have signed the bill.
- The I.O. states that the defect liability period is for two years upto May -2017. The work is stated to be completed on 20.05.2015. The letter dated: 20.01.2017 is produced showing that the contractor who had executed the work is called upon to rectify the defects/damages to the alleged road. Two letters of similar kind dated: 10.12.2016 and 31.12.2016 is noted in the reference of the said letter. This shows that upto December 2016 the respondents have not called the contractor to rectify the defects/damages caused to the alleged road immediately.

9. In view of the above discrepancies, the comments of DGO 1 and 2 cannot be accepted at this stage. There are prima facie there are materials to indict the DGO No.1 and 2 for the above said misconduct. Hence, DGO No.1 & 2 have failed to maintain absolute integrity, devotion to

duty and have acted in a manner which is unbecoming of a Government Servant for which they have made themselves liable for departmental action.

10. Accordingly, acting under Section 12(3) of the Karnataka Lokayukta Act, recommendation is made to the Competent Authority to initiate disciplinary proceedings against DGO No.1 & 2 i.e, (1)Shri Annappa Kudari, Assistant Executive Engineer, PWD Sub-Division, Afzalpur and (2) Shri Shamasundar Saranad, Junior Engineer, PWD Sub-Division, Afzalpur, Afzalpur Taluk, Kalaburgi District to entrust the inquiry to this Authority U/Rule 14-A of Karnataka Civil Services (Classification, Control and Appeal) Rules, 1957. *In turn*, the Competent Authority initiated disciplinary proceedings against DGO No.1 & 2 and entrusted the enquiry to this Institution vide reference no.1 and Hon'ble Upalokayukta-1 has nominated this Enquiry Authority to conduct enquiry and report vide reference Nos. 2 and 3. *Hence*, this charge.

4. ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಸಕ್ಷಮ ಪ್ರಾಧಿಕಾರವು ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ ನಿ.ಪಿ.4 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಇವರ ಪಾಟಿ ಸವಾಲಿನಲ್ಲಿ ಆ.ಸ.ನೌ ಇವರು ನಿ.ಡಿ.1 ನ್ನು ಗುರುತಿಸಿಕೊಂಡಿರುತ್ತಾರೆ. ಶಿಸ್ತು ಪ್ರಾಧಿಕಾರವು ತನಿಖಾಧಿಕಾರಿಗಳನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷಿ ಮಾಡಿಸಲಾಗಿದೆ. ಅವರಿಂದ ನಿ.ಪಿ.5 ರಿಂದ

B

ನಿ.ಪಿ.10 ರವರೆಗೆ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌರವರ ಪರವಾಗಿ ಆ.ಸ.ನೌ–2 ಇವರನ್ನು ಡಿ.ಜಿ.ಓ–1 ಎಂದು ಸಾಕ್ಷಿ ಮಾಡಿಸಿರುತ್ತಾರೆ ಇವರ ಕಡೆಯಿಂದ ನಿ.ಡಿ.2 ರಿಂದ ನಿ.ಡಿ.10 ರವರೆಗೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ–1 ಇವರು ಆ.ಸ.ನೌ–2 ಇವರು ಮಾಡಿದ ಸಾಕ್ಷಿಯನ್ನು ಅನುಮೋದನೆ ಮಾಡಿಕೊಂಡಿರುತ್ತಾರೆ.

5. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಆಲಿಸಲಾಯಿತು.

6. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

7. ದೂರುದಾರರು ತನ್ನ ಲಿಖಿತ ವಾದವನ್ನು ಮಂಡಿಸಿರುತ್ತಾರೆ. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

8. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

9. ದೂರುದಾರರಾದ ಶ್ರೀ. ಸಂತೋಷ ಟಿ ದೊಡ್ಡಮನಿ, ಪಂಚಶೀಲನಗರ, ಅಫಜಲ್‌ಪುರ ತಾಲ್ಲೂಕ್, ಇವರು ತಮ್ಮ ದೂರಿನಲ್ಲಿ 2013–14ನೇ ಸಾಲಿನಲ್ಲಿ ನಬಾರ್ಡ್ ಆರ್.ಐ.ಡಿ.ಎಫ್–19ರಡಿ ಕೈಗೊಳ್ಳಲಾದ ಶಿರವಾಳದಿಂದ ದೂಧನಿ ರಸ್ತೆ ಕಿ.ಮೀ.10 ರಿಂದ 14.70 ರವರೆಗೆ (ಕಾಮಗಾರಿ

ಸರಪಳಿ 9.30 ರಿಂದ 10.00 ರವರೆಗೆ ಮತ್ತು 11.50 ರಿಂದ 14.20ರವರೆಗೆ) ರಸ್ತೆ ನಿರ್ಮಾಣ ಕಾಮಗಾರಿ ಹಾಗೂ ಎರಡು ಚರಂಡಿ ನಿರ್ಮಾಣ ಕಾಮಗಾರಿಗಳನ್ನು ಕಳಪೆ ಗುಣಮಟ್ಟದಿಂದ ನಿರ್ವಹಿಸಿರುವುದಾಗಿ ದೂರು ನೀಡಿದ್ದು ಇರುತ್ತದೆ.

10. ಆ.ಸ.ನೌ–1 ಮತ್ತು 2 ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆನ್ನು ಸಲ್ಲಿಸಿದ್ದು, ಅದರಲ್ಲಿ ಸದರಿ ಕಾಮಗಾರಿಯು 2013–14ನೇ ಸಾಲಿಗೆ ಸೇರಿರುತ್ತದೆ. ಸದರಿ ಕಾಮಗಾರಿಯು ದಿನಾಂಕ: 29.09.2014 ರಂದು ಪ್ರಾರಂಭಿಸಿ ದಿನಾಂಕ: 20.05.2015 ರಂದು ಪೂರ್ಣಗೊಂಡಿರುತ್ತದೆ. ಸದರಿ ರಸ್ತೆ ನಿರ್ವಹಣಾ ಅವಧಿಯು ಮೇ–2017 ರವರೆಗೆ ಇರುತ್ತದೆ. ಆದರೆ ದೂರುದಾರರು ಕಾಮಗಾರಿಯು ಪೂರ್ಣಗೊಳ್ಳದೇ ಇದ್ದರೂ ದಿನಾಂಕ: 24.02.2015 ರಂದು ಈ ಸಂಸ್ಥೆಗೆ ದೂರನ್ನು ನೀಡಿ, ಸದರಿ ಕಾಮಗಾರಿಯು ಕಳಪೆಯಾಗಿದ್ದು, ಅದನ್ನು ಪರೀಕ್ಷಿಸಬೇಕು ಎಂದು ನಮೂದಿಸಿರುತ್ತಾರೆ. ಕಾಮಗಾರಿಯನ್ನು ಪೂರ್ಣಗೊಳ್ಳದೇ ಮೂರನೇಯ ತಂಡದವರು ಕಾಮಗಾರಿಯನ್ನು ಪರಿವೀಕ್ಷಿಸಿ ನೀಡುವ ವರದಿಯನ್ನು ಪಡೆದುಕೊಳ್ಳದೇ ದೂರುದಾರರು ಸುಳ್ಳು ದೂರನ್ನು ದಾಖಲಿಸಿರುತ್ತಾರೆ. ದೂರುದಾರರು ಆಪಾದಿಸಿರುವಂತೆ, ಕಳಪೆ ಕಾಮಗಾರಿ ಎಂಬುದಕ್ಕೆ ಯಾವುದೇ ದಾಖಲಾತಿಗಳನ್ನು ದೂರಿನೊಂದಿಗೆ ಹಾಜರುಪಡಿಸಿರುವುದಿಲ್ಲ.

11. ಮುಂದುವರೆದು, ದೂರುದಾರರು ಮಾಡಿರುವ ಆಪಾದನೆಗೆ ಸಂಬಂಧಿಸಿದಂತೆ, ಈ ಸಂಸ್ಥೆಯ ಶ್ರೀ. ಹೆಚ್.ಎಸ್ ಶ್ರೀನಿವಾಸಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು–5, ಇವರನ್ನು ತನಿಖಾಧಿಕಾರಿಗಳು ನೇಮಿಸಿದ್ದು, ಇವರು ಸ್ಥಳ ತನಿಖೆಯನ್ನು ಮಾಡಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳು ದಿ:18.01.2017ರಂದು ಹಾಜರಿದ್ದ ಅವಧಿಯಲ್ಲಿ, ತಾವು ಸಹ ಹಾಜರು ಇರುವುದಾಗಿ ಹೇಳಿರುತ್ತಾರೆ. ಅವರು ತಮ್ಮ ವರದಿಯಲ್ಲಿ ಸದರಿ ಕಾಮಗಾರಿಯನ್ನು ದಿನಾಂಕ: 29.09.2014 ರಂದು ಪ್ರಾರಂಭಿಸಲಾಗಿರುತ್ತದೆ, ಸದರಿ ಕಾಮಗಾರಿಯು ನಡೆಯುವ ಸಂದರ್ಭದಲ್ಲಿ ಕಾಮಗಾರಿಗೆ ಬಳಸುವ ಎಲ್ಲಾ ಸಾಮಗ್ರಿಗಳನ್ನು ಸಹ ಸಂಬಂಧಪಟ್ಟ ಗುಣಭರವಸೆ ನಿಯಂತ್ರಣಾಧಿಕಾರಿಗಳಿಂದ ಪರೀಕ್ಷಿಸಿ, ಕಾಮಗಾರಿಗೆ ಬಳಸಲಾಗಿರುತ್ತದೆ. ಕಾಮಗಾರಿಯನ್ನು ದೂರುದಾರರು ಆಪಾದಿಸಿರುವಂತೆ ಕಳಪೆಯಾಗಿ ನಿರ್ವಹಿಸಿರುವುದಿಲ್ಲ. ಸದರಿ ಕಾಮಗಾರಿಯ ನಿರ್ವಹಣಾ ಅವಧಿಯು ಮೇ–2017ರವರೆಗೆ ಇದ್ದರೂ ಸಹ ಗುತ್ತಿಗೆದಾರರಿಗೆ ರಸ್ತೆ ನಿರ್ವಹಣೆ

ಮಾಡಲು ಪತ್ರಗಳನ್ನು ಬರೆಯಲಾಗಿದೆ. ಮುಂದುವರೆದು, ಕಾಮಗಾರಿಯಲ್ಲಿ ಗುಂಡಿಗಳು ಬಿದ್ದರೂ ಸಹ ಅವುಗಳನ್ನು ಮುಚ್ಚುವ ಕೆಲಸವನ್ನು ಗುತ್ತಿಗೆದಾರರೇ ಕೈಗೊಳ್ಳಬೇಕಾಗಿರುತ್ತದೆ.

12. ಕಾಮಗಾರಿಯನ್ನು ಹಂತ–ಹಂತವಾಗಿ ಪೂರ್ಣಗೊಳಿಸುವ ಅವಧಿಯಲ್ಲಿ ಗುತ್ತಿಗೆದಾರರು, ಮೊದಲನೇ, ಎರಡನೇ, ಮೂರನೇ ಹಾಗೂ ಅಂತಿಮ ರನ್ನಿಂಗ್ ಬಿಲ್ಲುಗಳನ್ನು ಸಲ್ಲಿಸಿದಾಗ ಅಂತಹ ಬಿಲ್ಲುಗಳಿಗೆ ಕಂತು ಕಂತಾಗಿ ಕಾಮಗಾರಿಯ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಪ್ರತಿದಿನ ನಡೆಯುವ ಕಾಮಗಾರಿ ಅಳತೆಗಳನ್ನು ಒಂದು ಕಚ್ಚಾ ಪುಸ್ತಕದಲ್ಲಿ ದಾಖಲಿಸಿ ಕಾಮಗಾರಿಯ ಅಳತೆಗಳನ್ನು ಕಿರಿಯ ಅಭಿಯಂತರರು ಅಥವಾ ಸಹಾಯಕ ಅಭಿಯಂತರರು ದಾಖಲಿಸಿರುತ್ತಾರೆ. ಗುತ್ತಿಗೆದಾರರಿಗೆ ಕಂತು ಕಂತಾಗಿ ಹಣವನ್ನು ಬಿಡುಗಡೆ ಸಮಯದಲ್ಲಿ ಒಂದೇ ಬಾರಿಗೆ ಕಾಮಗಾರಿಯ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿ ಮೇಲಾಧಿಕಾರಿಯಾದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸಲ್ಲಿಸಲಾಗುವುದು. ಅವರು ಖುದ್ದು ಸ್ಥಳ ಪರಿವೀಕ್ಷಣೆಯನ್ನು ನಡೆಸುವರು. ತದನಂತರ ಅಳತೆ ಪುಸ್ತಕದಲ್ಲಿ ಮೇಲು ರುಜು ಮಾಡಿ ಕಾರ್ಯಪಾಲಕ ಅಭಿಯಂತರರಿಗೆ ಕಳುಹಿಸಿ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಲು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಈ ಕಾಮಗಾರಿಯಲ್ಲಿಯೂ ಸಹ ಇದೇ ರೀತಿಯ ವಿಧಾನವನ್ನು ಅನುಸರಿಸಲಾಗಿರುತ್ತದೆ. ತನಿಖಾಧಿಕಾರಿಯವರು ಸಲ್ಲಿಸುವಂತಹ ತನಿಖಾ ವರದಿಯ ಪ್ರಕಾರ ಕಾಮಗಾರಿಯಲ್ಲಿ ಯಾವುದೇ ರೀತಿಯ ಸರ್ಕಾರಿ ಹಣ ದುರ್ಬಳಕೆಯಾಗಿರುವುದಿಲ್ಲ ಹಾಗೂ ಕಳಪೆ ಕಾಮಗಾರಿಯಾಗಿರುವುದಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಕಾರಣ ತಾವು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

13. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಶಿರವಾಳದಿಂದ ದುದನಿಯವರೆಗೆ ರಸ್ತೆ ಕಾಮಗಾರಿಗೆ ಸಂಬಂಧಪಟ್ಟಂತೆ ಡಾಂಬರೀಕರಣ, ಪ್ಯಾಚ್‌ವರ್ಕ್‌ಗಳಿಗಾಗಿ ನಬಾರ್ಡ್‌ನಿಂದ 2013–14ನೇ ಸಾಲಿನಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷ ಹಣ ಬಿಡುಗಡೆಯಾಗಿದೆ. ನೀಲಕಂಠರಾವ್ ಮುಳಗಿ ಎನ್ನುವವರಿಗೆ ಟೆಂಡರ್ ನೀಡಲಾಗಿದೆ. ಡಾಂಬರೀಕರಣ ಮತ್ತು ಪ್ಯಾಚ್‌ವರ್ಕ್‌ಗಳನ್ನು ಮಾಡದೇ ಬಿಲ್ಲನ್ನು ತಯಾರಿಸಿ ಮೇಲೆ ಹೇಳಿದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಸದರಿ ರಸ್ತೆಯು ತಾನು ದಿನಾಲು ಓಡಾಡುವ ರಸ್ತೆಯಾಗಿದ್ದು, ಕಳಪೆ ಕಾಮಗಾರಿಯನ್ನು ಗಮನಿಸಿ

ಆ.ಸ.ನೌ ರವರ ಬಳಿ ಹೇಳಿದಾಗ, ಅವರು ಕಳಪೆ ಕಾಮಗಾರಿಯನ್ನು ಸರಿಮಾಡಲಿಲ್ಲ. ಆದ್ದರಿಂದ ತಾನು ದೂರನ್ನು ಸಲ್ಲಿಸಿರುವೆ ಎಂದು ಹೇಳಿರುತ್ತಾರೆ.

14. ನಿಶಾನೆ 1 ದೂರು, ನಿಶಾನೆ 2 ಮತ್ತು 3 Form I & II ವಿಚಾರಣೆ ಹಾಗೂ ನಿಶಾನೆ 4 (3) ಛಾಯಾಚಿತ್ರಗಳು.

15. ಈ ಪ್ರಕರಣದಲ್ಲಿ ಈ ಸಂಸ್ಥೆಯಿಂದ ಶ್ರೀ. ಹೆಚ್.ಎಸ್ ಶ್ರೀನಿವಾಸ ಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಸ್ಥಳ ತನಿಖೆಯಲ್ಲಿ ಮಾಡಿ, ತನಿಖಾ ವರದಿಯನ್ನು ಸಲ್ಲಿಸಲು ನಿರ್ದೇಶನ ನೀಡಿದ್ದು ಇರುತ್ತದೆ. ಇವರು ಪಿ.ಡಬ್ಲ್ಯೂ-2 ಎಂದು ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮಾನ್ಯರ ಆದೇಶದಂತೆ, ಕಾಮಗಾರಿ ಸ್ಥಳ ಪರಿಶೀಲನೆ ಕೈಗೊಳ್ಳು ಸಲುವಾಗಿ ದೂರುದಾರರಿಗೆ ಹಾಗೂ ಎದುರುದಾರರಿಗೆ ದಿನಾಂಕ: 05-01-2017 ರಂದು ನೊಂದಾಯಿತ ಅಂಚೆ ಸ್ವೀಕೃತಿ ಮೂಲಕ ನೋಟೀಸನ್ನು ನೀಡಿ, ದಿನಾಂಕ: 18-01-2017 ರಂದು ಸ್ಥಳ ತನಿಖೆಗಾಗಿ ಕೈಗೊಳ್ಳವುದಾಗಿ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಂತರ, ದಿನಾಂಕ: 18-01-2017 ರಂದು ಸ್ಥಳಕ್ಕೆ ಭೇಟಿ ನೀಡಿದಾಗ ದೂರುದಾರರು ಹಾಜರು ಇರಲಿಲ್ಲ. ಅವರಿಗೆ ದೂರವಾಣಿ ಮುಖಾಂತರ ತಿಳಿಸಿದಾಗಲೂ ಸಹ ಅವರು ಹಾಜರಾಗಲಿಲ್ಲ ಎಂದು ನುಡಿದಿರುತ್ತಾರೆ. ಸ್ಥಳದಲ್ಲಿ ಆ.ಸ.ನೌ ರವರು ಶ್ರೀ. ಲಕ್ಷ್ಮೀಕಾಂತ್ ಮಿತ್ರಾ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಉಪ ವಿಭಾಗ, ಅಫಜಲ್‌ಪುರ; ಶ್ರೀ. ರಮೇಶ, ಕಿರಿಯ ಅಭಿಯಂತರರು ಹಾಗೂ ಶ್ರೀ. ಸತೀಶ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣಭರವಸೆ ಉಪವಿಭಾಗ, ಕಲಬುರಗಿ ಇವರುಗಳು ಹಾಜರಿದ್ದರು ಎಂದು ನುಡಿದಿರುತ್ತಾರೆ.

16. ಮುಂದುವರೆದು, ಸ್ಥಳ ತನಿಖೆಯ ವೇಳೆಯಲ್ಲಿ ವಿಡಿಯೋ ಚಿತ್ರೀಕರಣ ಹಾಗೂ ಛಾಯಾಚಿತ್ರಗಳನ್ನು ತೆಗೆಯಲಾಯಿತು. ಕಾಮಗಾರಿಯಲ್ಲಿ ಮುಖ್ಯವಾಗಿ;

1. ಗ್ರೇಡ್-3 WBM-1 ಪದರು

2. ಗ್ರೇಡ್–2 WBM-2 ಪದರು
3. ಡಾಂಬರು SDBC
4. 2 ಸೈಡ್ ಅಡ್ಡ ಮೋರಿಗಳು
5. ರಸ್ತೆಯ ಇಕ್ಕೆಲಗಳ ಪ್ಯೋಲ್ಡರ್ಸ್ ಅಂಶಗಳು ಇದ್ದು,

17. ಈ ಕಾಮಗಾರಿಯು ಗುಣಮಟ್ಟಕ್ಕೆ ಸಂಬಂಧಿಸಿದ್ದರಿಂದ, ಗುಣಭರವಸೆ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದು ಕಾಮಗಾರಿಯನ್ನು ಪರಿಶೀಲಿಸಲು ಶಿರವಾಳ ಕಡೆಯಿಂದ ದುಧನಿಯ ಕಡೆಗೆ ಕಿ.ಮೀ. 9.30 ಯಿಂದ ಪ್ರಾರಂಭಿಸಲಾಗಿ, ಮೊದಲು ರಸ್ತೆಯ ಅಗಲವನ್ನು ಅಳೆಯಲಾಗಿ ಕನಿಷ್ಟ 3–78 ಮೀ ಇರುವುದನ್ನು ಪರಿಶೀಲಿಸಲಾಯಿತು. ಇದೇ ಜಾಗದಲ್ಲಿ ಮಾದರಿ ಗುಂಡಿಯನ್ನು ತೆಗೆದು ಡಾಂಬರನ್ ದಪ್ಪವನ್ನು ಪರಿಶೀಲಿಸಲಾಗಿ, 2 ಮೂಲೆಗಳು 28 ಮಿ.ಮೀ. ಹಾಗೂ 25 ಮಿ.ಮೀ ಇರುವುದನ್ನು ಖಾತ್ರಿಪಡಿಸಿಕೊಳ್ಳಲಾಯಿತು. ಕಿ.ಮೀ. 9.30 ರಿಂದ 10.ಕಿ.ಮೀ. ರವರೆಗೆ ರಸ್ತೆಯಲ್ಲಿ ಸಣ್ಣ ಗುಂಡಿಗಳಾಗಿರುವುದನ್ನು ಕಂಡು ಬಂದಿರುತ್ತವೆ ಎಂದು ನುಡಿದಿರುತ್ತಾರೆ.

18. ಮುಂದುವರೆದು, ಕಾಮಗಾರಿಯ ರಸ್ತೆಯ ಕಿ.ಮೀ. 11.50 ರಿಂದ 14.20 ಕಿ.ಮೀ. ರವರೆಗೆ ಪರಿಶೀಲಿಸಲಾಗಿ ರಸ್ತೆಯಲ್ಲಿ ಹಲವು ಗುಂಡಿ ಬಿದ್ದಿರುವುದನ್ನು ಗಮನಿಸಲಾಯಿತು. ಇದೇ ರಸ್ತೆಯ ಸರಪಳಿ 11.60 ಕಿ.ಮೀ ಅಡ್ಡಮೋರಿ (ಸಿ.ಡಿ.) ಯನ್ನು ನಿರ್ಮಿಸಿದ್ದು, ಈ ನಿರ್ಮಾಣವು ಅಂದಾಜಿನಲ್ಲಿ ಇರುವ ಹಾಗೂ ಅಳತೆ ಪುಸ್ತಕದಲ್ಲಿ ದಾಖಲಾಗಿರುವ ಅಳತೆಗಳಿಗೆ ತಾಳೆಯಾಗಿರುವುದನ್ನು ಖಾತ್ರಿಪಡಿಸಿ ಮಹಜರನಲ್ಲಿ ದಾಖಲಿಸಲಾಯಿತು. ಅಡ್ಡಮೋರಿಯ ಹೆಡ್‌ವಾಲ್‌ಗಳ ಫಿನಿಷಿಂಗ್ ಕಾಮಗಾರಿ ಕೈಗೊಳ್ಳದಿರುವುದನ್ನು ಗಮನಿಸಲಾಗಿ, ಅಳತೆ ಪುಸ್ತಕ ಪರಿಶೀಲಿಸಲಾಗಿ, ಫಿನಿಷಿಂಗ್ ಕಾಮಗಾರಿಯಾದ ಪ್ಲಾಸ್ಟರಿಂಗ್ ಮತ್ತು ಪೇಂಟಿಂಗ್ ಕಾಮಗಾರಿಯನ್ನು ಅಳತೆ ಪುಸ್ತಕದಲ್ಲಿ ನಮೂದಿಸಿರುವುದಿಲ್ಲ ಮತ್ತು ಈ ಅಂಶಗಳನ್ನು ಹಣ ಪಾವತಿ ಆಗದೇ ಇರುವುದನ್ನು ಖಾತ್ರಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ.

19. ಮುಂದುವರೆದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಸರಪಳಿ 13 ಕಿ.ಮೀ. ನಲ್ಲಿ ಗುಣಮಟ್ಟ ಪರೀಕ್ಷೆಗಾಗಿ 0.50 ಮೀ x 0.50 ಮೀ ಅಳತೆಯ ಮಾದರಿ ಗುಂಡಿಯನ್ನು ಗುಣಮಟ್ಟ ಅಧಿಕಾರಿಗಳು ತೋಡಲಾಗಿ, ಡಾಂಬರ್ ದಪ್ಪವು 2 ಮೂಲೆಗಳಲ್ಲಿ ಕ್ರಮವಾಗಿ 33 ಎಂ.ಎಂ.

ಮತ್ತು 25.55 ಎಂ.ಎಂ. ಇರುವುದು ಕಂಡುಬಂದಿರುತ್ತದೆ. ಮುಂದುವರೆದು ಡಾಂಬರ್ ತಳಗಿನ ಸಬ್‌ಬಾಸ ಆದ ಜಲ್ಲಿಕಲ್ಲು ಅಗೆದು ತೂಕ ಮಾಡಲಾಗಿ 99.33 ಕಿಲೋ ಗ್ರಾಂ ಇರುವುದನ್ನು ಖಾತ್ರಿ ಪಡಿಸಿಕೊಳ್ಳಲಾಯಿತು. More specification ಈ ತೂಕವು ಕನಿಷ್ಟ 99 ಕಿಲೋ ಗ್ರಾಂ ಇರಬೇಕಾಗಿರುವುದನ್ನು ದಾಖಲೆಗಳಿಂದ ಪರಿಶೀಲಿಸಲಾಗಿದೆ. ಸಬ್‌ಬೇಸನ ಒಟ್ಟು ದಪ್ಪವು 2 ಮೂಲೆಗಳಲ್ಲಿ ಕ್ರಮವಾಗಿ 27.45 ಸೆಂ.ಮೀ ಮತ್ತು 23.70 ಸೆಂ.ಮೀ ಇರುವುದನ್ನು ಖಾತ್ರಿ ಪಡಿಸಿ, ಈ ದಪ್ಪವು ಅಂದಾಜಿನಂತೆ ಕನಿಷ್ಠ 22.50 ಸೆಂ.ಮೀ. ಇರಬೇಕಾಗಿದ್ದನ್ನು ದಾಖಲೆಯಿಂದ ಪರಿಶೀಲಿಸಲಾಗಿದೆ.

20.ಮುಂದುವರೆದು, ಸರಪಳಿ 14.30 ಕಿ.ಮೀ. ನಲ್ಲಿ ಮತ್ತೊಂದು ಸಿ.ಡಿ. (ಅಡ್ಡಮೋರಿ)ಯನ್ನು ನಿರ್ಮಿಸಿರುವುದು ಕಂಡುಬಂದಿದ್ದು, ಪೂರ್ಣವಾಗಿ ಅಳೆಯಲಾಗಿ ಅಂದಾಜಿನಲ್ಲಿ ಹಾಗೂ ಅಳತೆ ಪುಸ್ತಕದಲ್ಲಿ ನಮೂದಿಸಿರುವ ಅಳತೆಗಳಿಗೆ ತಾಳೆಯಾಗುವುದನ್ನು ಗಮನಿಸಲಾಗಿದೆ ಎಂದು ಸಾಕ್ಷಿಯನ್ನು ನುಡಿದಿರುತ್ತಾರೆ.

21. ದೂರುದಾರರು ದಿನಾಂಕ: 24.02.2015 ರಂದು ದೂರು ಸಲ್ಲಿಸಿದ್ದು, ಅದರಲ್ಲಿ 2013–14ನೇ ಸಾಲಿನ ನಬಾರ್ಡ್ ಆರ್.ಐ.ಡಿ.ಎಫ್–19 ಸ್ಕೀಮ್‌ನಲ್ಲಿ ರಸ್ತೆಯ ಕಾಮಗಾರಿ ಕಳಪೆಮಟ್ಟದಾಗಿದ್ದು, ಎದುರುದಾರರು ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ ಅಂತ ಹೇಳಿರುತ್ತಾರೆ. ಆ.ಸ.ನೌ–2 ರವರು ಡಿ.ಡಬ್ಲ್ಯೂ–1 ಎಂದು ಸಾಕ್ಷಿ ನುಡಿದಿರುತ್ತಾರೆ. ತಮ್ಮ ಸಾಕ್ಷಿಯಲ್ಲಿ ತಮ್ಮ ಪರವಾಗಿ ನಿ.ಡಿ.1 ರಿಂದ ನಿ.ಡಿ.10 ದಾಖಲಾತಿಗಳನ್ನು ನಿಶಾನೆಗೆ ಒಳಪಡಿಸಿಕೊಂಡಿರುತ್ತಾರೆ. ನಿ.ಡಿ.4 ಇದು ಕಾಮಗಾರಿಯ ಪೂರ್ಣಗೊಂಡ ವರದಿಯಿದ್ದು, ಅದರಲ್ಲಿ ಈ ಕಾಮಗಾರಿಯ ಪ್ರಾರಂಭಗೊಂಡ ದಿನಾಂಕ: 29.09.2014. ಪೂರ್ಣಗೊಳ್ಳಬೇಕಾದ ದಿನಾಂಕ 28.06.2015 ಇರುತ್ತದೆ. ಆದರೆ, ಸ್ಥಳದಲ್ಲಿ ಕಾಮಗಾರಿಯು ಪೂರ್ಣಗೊಂಡ ದಿನಾಂಕ: 20.05.2015 ಇರುತ್ತದೆ. ದೂರುದಾರರು ದೂರಿನೊಂದಿಗೆ (3) ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಸದರಿ ಛಾಯಾಚಿತ್ರಗಳಲ್ಲಿ ರಸ್ತೆಯಲ್ಲಿ ಜಲ್ಲಿ ಶೇಖರಿಸಿದ್ದು, ಸಿಮೆಂಟ್ ಜೊತೆ ಜೆಲ್ಲಿ ಕಲ್ಲುಗಳು ಶೇಖರಿಸಿರುವುದು ಕಂಡು ಬರುತ್ತದೆ. ನಿ.ಡಿ.4 ರ ಪ್ರಕಾರ ಕಾಮಗಾರಿಯು ದಿನಾಂಕ: 20.05.2015 ರಂದು ಮುಗಿಯಲಿವೆ

ಅಂತಾ ನಮೂದು ಇರುವುದರಿಂದ, ದೂರು ಸಲ್ಲಿಸಿದಾಗ ರಸ್ತೆ ಕಾಮಗಾರಿಯ ಕೆಲಸ ಚಾಲ್ತಿಯಲ್ಲಿ ಇತ್ತು ಅಂತಾ ಕಂಡುಬರುತ್ತದೆ.

22.ನಂತರ, ಮೇಲೆ ಹೇಳಿದ ಹಾಗೆ ಈ ಸಂಸ್ಥೆಯಿಂದ ಪಿ.ಡಬ್ಲ್ಯೂ-2 ರವರನ್ನು ತನಿಖಾಧಿಕಾರಿಗಳನ್ನು ನೇಮಿಸಲು ಅವರು ತಾವು ಕೊಟ್ಟ ತನಿಖೆಯ ವರದಿಯನ್ನು ಸಲ್ಲಿಸಿದ್ದು ಅದನ್ನು ನಿ.ಪಿ.5 ಎಂದು ಗುರುತಿಸಲಾಗಿರುತ್ತದೆ. ಈಗಾಗಲೇ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವನ್ನು ಹೇಳಿದ್ದು, ಇರುತ್ತದೆ.

23.ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ 3.09 (iii)ರಲ್ಲಿ "ಆದರೆ, ತನಿಖೆಯಲ್ಲಿ ಕಂಡುಬಂದ ಮುಖ್ಯ ಅಂಶವೇನೆಂದರೆ ಈ ಎರಡು ಸಿ.ಡಿ.ಗಳ ಫಿನಿಷಿಂಗ್ ಕೆಲಸ ಅಂದರೆ plastering, painting ಕೆಲಸಗಳನ್ನು ಕೈಗೊಂಡಿಲ್ಲ ಮತ್ತು finishing ಕೆಲಸವನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿಲ್ಲದಿರುವುದು ಕಂಡುಬಂದಿರುತ್ತದೆ" ಎಂದು ನಮೂದು ಇರುತ್ತದೆ. ಈ ವಿಷಯದ ಬಗ್ಗೆ ಎದುರುದಾರರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಆದರೆ, ಮಹಜರಿನಲ್ಲಿ (ನಿ.ಪಿ-6)ರಲ್ಲಿ ಹೆಡ್‌ವಾಲ್‌ಗಳ ಪಿನಿಷಿಂಗ್ ಕಾಮಗಾರಿ ಬಾಕಿ ಇರುತ್ತದೆ ಎಂದು ಹೇಳಿರುತ್ತಾರೆ. ಅಂದರೆ, ಕಾಮಗಾರಿಯಾಗಿ 2 ವರ್ಷದವರೆಗೂ ಈ ಕೆಲಸ ಹಾಗೆ ಉಳಿದಿರುವುದಾಗಿದೆ ಅಂತಾ ಕಂಡುಬರುತ್ತದೆ.

24.ತನಿಖಾಧಿಕಾರಿಗಳು ತಮ್ಮ ವರದಿ 4.00 (i)ರಲ್ಲಿ "ರಸ್ತೆಯ ಒಟ್ಟು ಉದ್ದವಾದ 3.40 ಕಿ.ಮೀ. ಪೈಕಿ ಸುಮಾರು 0.80 ಕಿ.ಮೀ. ನಷ್ಟ ರಸ್ತೆಯಲ್ಲಿ ಅನೇಕ ಭಾಗಗಳಲ್ಲಿ ಗುಂಡಿ ಬಿದ್ದಿರುವುದು ಹಾಗೂ ರಸ್ತೆಯು ಕುಸಿದಿರುವುದು ಕಂಡುಬಂದಿದ್ದು, ಗುಣಭರವಸೆ ಅಧಿಕಾರಿಗಳು ಈ ಭಾಗದಲ್ಲಿ ಮಾದರಿ ಗುಂಡಿ ತೋಡಿ ವರದಿ ಸಲ್ಲಿಸಿರುವಂತೆ (ಅ) ರಸ್ತೆಗೆ ಅಳವಡಿಸಿರುವ ಡಾಂಬರಿನ ಅಂಶವು ನಿಗದಿತ ಪ್ರಮಾಣಕ್ಕೆ ತಕ್ಕಂತೆ ಇರುತ್ತದೆ (ಈ ಮಾದರಿಯ ಡಾಂಬರ-ಎಸ್.ಡಿ.ಬಿ.ಸಿ.ಯಲ್ಲಿ 5.05% ಬಿಟುಮಿನ್ ಅಂಶ ಇರಬೇಕಾಗಿದ್ದು, ಮಾದರಿಯಲ್ಲಿ 5.00 ಯಿಂದ 5.05% ಬಿಟುಮಿನ ಇರುವುದಾಗಿ ವರದಿ ಸಲ್ಲಿಸಿರುತ್ತಾರೆ. (ಆ) ಜಲ್ಲಿಯನ್ನು ಪರಿಶೀಲಿಸಿ ಅದರ impact value

ಫಲಿತಾಂಶವು ತೃಪ್ತಿಕರವಾಗಿದೆ ಎಂದು ವರದಿ ನೀಡಿರುತ್ತಾರೆ (ಇ) ಗ್ರೇಡ್-II ಎರಡು ಪದರ ಹಾಗೂ ಗ್ರೇಡ್-III ಒಂದು ಪದರ ಸೇರಿ ಒಟ್ಟು ಜಲ್ಲಿಯ ತೂಕವು 99 ಕೆ.ಜಿ. ಇರಬೇಕಾಗಿದ್ದು, ಮಾದರಿ ಗುಂಡಿಯಲ್ಲಿ ಜಲ್ಲಿಯ ತೂಕ 99.33 ಕೆ.ಜಿ. ಇದ್ದು, ಜಲ್ಲಿಯ ತೂಕವು ತೃಪ್ತಿಕರವಾಗಿರುವುದು ಕಂಡುಬರುತ್ತದೆ."

25.ಗುಣಭರವಸೆ ಅಧಿಕಾರಿಗಳು ನೀಡಿದ ವರದಿ ನಿ.ಡಿ.3 ಅಂತಾ ಗುರುತಿಸಲಾಗಿದ್ದು, ಇದರ ಪ್ರಕಾರ, ಗುಣಭರವಸೆ ಅಧಿಕಾರಿಗಳು ದಿನಾಂಕ: 11.05.2015 ರಂದು ಕಾಮಗಾರಿಯನ್ನು ತಪಾಸಣೆ ಮಾಡಿದ್ದು, ಮಣ್ಣನ್ನು ಪ್ರಯೋಗಶಾಲೆಗೆ ಕಳುಹಿಸಿದ್ದು, ದಿನಾಂಕ: 11.05.2015, ತಪಾಸಣೆಯನ್ನು ಮಾಡಿದ್ದು ದಿನಾಂಕ: 13.05.2015 ರಂದು ಅದರಲ್ಲಿ column No.5 ರಲ್ಲಿ requirement as per mix decision vide Lt No.1 dated 08.04.2015 5.05% by Wt of total mix ಎಂದು ನಮೂದಾಗಿ ಇರುತ್ತದೆ. Column No.2 and 4 ರಲ್ಲಿ Bitumen content in % of total, sample-1 at KM ch 12.50 5-04, sample-2 at KM ch 11.06 5-05 ಅಂತಾ ನಮೂದು ಇರುತ್ತದೆ. ಈ ವರದಿಯ ಕಾಮಗಾರಿಯ ನಡೆಯುತ್ತಿರುವಾಗಿನದು ಇರುತ್ತದೆ.

26.ತನಿಖಾಧಿಕಾರಿಗಳು ಕಾಮಗಾರಿ ಮುಗಿದು ಅಂದಾಜು 2 ವರ್ಷಗಳ ನಂತರ ಅಂದರೆ ಕಾಮಗಾರಿ ಮುಗಿದಿದ್ದು, ದಿನಾಂಕ: 20.05.2015, ಇವರು ಭೇಟಿ ನೀಡಿದ್ದು, ದಿನಾಂಕ: 18.01.2017 ಇರುತ್ತದೆ. ಇವರು ತಮ್ಮ ವರದಿ 3.03 ರಲ್ಲಿ "ತನಿಖೆಯನ್ನು ಪ್ರಾರಂಭಿಸಲಾಗಿ ಶಿರವಾಳ-ದುಧನಿ ರಸ್ತೆಯ 9.30 ಕಿ.ಮೀ. ಸರಪಳಿಯಲ್ಲಿ ಡಾಂಬರ್‌ನ ಎಸ್.ಡಿ.ಬಿ.ಸಿ.ಯ ಮಾದರಿಯನ್ನು ಅಗೆದು ಗುಣಮಟ್ಟ ಪರೀಕ್ಷೆಗೆ ತೆಗೆದುಕೊಳ್ಳಲಾಯಿತು. ಸದರಿ ಎಸ್.ಡಿ.ಬಿ.ಸಿ.ಯ ಮಾದರಿಯ ದಪ್ಪವನ್ನು ಪರಿಶೀಲಿಸಲಾಗಿ, ಕಾಮಗಾರಿಯ ಅಂದಾಜಿನಲ್ಲಿ ಅಳವಡಿಸಿರುವ 25.00 ಮಿ.ಮಿ.ಗೆ ಎದುರಾಗಿ ಒಂದು ಮೂಲೆಯಲ್ಲಿ 28.00 ಮಿ.ಮಿ. ಹಾಗೂ ಇನ್ನೊಂದು ಮೂಲೆಯಲ್ಲಿ 25.00 ಮಿ.ಮಿ. ಇರುವುದು ಕಂಡುಬಂದಿರುತ್ತದೆ. ಇದೇ ಸ್ಥಳದಲ್ಲಿ ರಸ್ತೆಯ ಅಗಲವನ್ನು ಅಳೆಯಲಾಗಿ ಕಾಮಗಾರಿಯ ಅಂದಾಜಿನಲ್ಲಿ ಅಳವಡಿಸಿರುವ ಅಗಲವಾದ 3.75 ಮಿ.ಗೆ ಎದುರಾಗಿ 3.78 ಮೀ. ಇರುವುದನ್ನು ಖಾತ್ರಿ ಪಡಿಸಿಕೊಳ್ಳಲಾಯಿತು" ಅಂತಾ ಹೇಳಿರುತ್ತಾರೆ.

27.ಇವರು ಗುಂಡಿ ಬಿದ್ದ ಸ್ಥಳದಲ್ಲಿ ಮಣ್ಣನ್ನು ಮಾದರಿಯಾಗಿ ಪಡೆದುಕೊಳ್ಳದೇ, ಅದೇ ರಸ್ತೆಯ ಬೇರೊಂದು ಕಡೆಗೆ ಗುಂಡಿ ತೆಗೆದು ಮಣ್ಣನ್ನು ಪಡೆದುಕೊಂಡಿದ್ದು ಇರುತ್ತದೆ. ಈ ಬಗ್ಗೆ ಛಾಯಾಚಿತ್ರವನ್ನು ಸಹ ಹಾಜರುಪಡಿಸಿರುತ್ತಾರೆ. (ಛಾಯಾಚಿತ್ರ ನಂ.96 ರಿಂದ 98) ರಲ್ಲಿ ಕಾಣಬಹುದಾಗಿದೆ. ಇವರು ಒಂದು ವೇಳೆ ಗುಂಡಿ ಬಿದ್ದ ಸ್ಥಳದಿಂದ ಮಣ್ಣನ್ನು ಮಾದರಿಗಾಗಿ ತೆಗೆದುಕೊಂಡಿದ್ದ ಆದಲ್ಲಿ ಅದರಲ್ಲಿ ಬಿಟುಮನ್ ಎಷ್ಟು ಬರುತ್ತಿತ್ತು ಅಂತಾ ಗೊತ್ತಾಗುತಿತ್ತು.

28.ತನಿಖಾಧಿಕಾರಿಗಳ ಪ್ರಕಾರ ಪ್ಯಾರಾ 4.02 ರಲ್ಲಿ ಹೇಳಿದ ಹಾಗೆ "ಪ್ರಸ್ತುತ ರಸ್ತೆಯ ಅನೇಕ ಗುಂಡಿಗಳಾಗಿರುವುದು ಮತ್ತು ಅನೇಕ ಕಡೆಗಳಲ್ಲಿ ರಸ್ತೆಯು ಕುಸಿದಿರುವುದು ಕಂಡುಬಂದಿದ್ದು, ಮೇಲಿನ ಕಂಡಿಕೆಗಳಲ್ಲಿ ಈ ರೀತಿ ರಸ್ತೆಯು ಹಾಳಾಗಿರುವುದಕ್ಕೆ ಎದುರುದಾರರು ನೀಡಿರುವ ಕಾರಣಗಳಾದ ಬಿ ಬೀಮಾ ನದಿಯಿಂದ ಮರಳು ಸಾಗಣೆಗೆ ಭಾರಿ ವಾಹನಗಳ ಚಲನೆ (ಅ) ಸುತ್ತಲ 6 ಸ್ಟೋನ್ ಕ್ರಷರ್‌ನಿಂದ ಜಲ್ಲಿ ಸಾಗಣೆಗೆ ಭಾರಿ ವಾಹನಗಳ ಚಲನೆ (ಇ) ಹತ್ತಿರದ 3 ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಣೆಗೆ ಭಾರಿ ವಾಹನಗಳ ಚಲನೆ (ಈ) ರೈತರು ತಮ್ಮ ಜಮೀನಿಗೆ ನೀರಾವರಿ ಮಾಡಿಕೊಳ್ಳಲು ರಸ್ತೆಯನ್ನು ಅಗೆಯುವುದು, ಇವುಗಳು ಸ್ವಲ್ಪ ಮಟ್ಟಿಗೆ ಕಾರಣವಾಗಿದ್ದರೂ, ಇವುಗಳೇ ಮುಖ್ಯ ಕಾರಣವೆಂದು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ, Indian Road Congress Special Publication 20ರ Rural Roads Manual ನ 5.2.3 Design Life ಪ್ಯಾರಾದಲ್ಲಿ ವಿವರಿಸಿರುವಂತೆ, ಗ್ರಾಮೀನ ಭಾಗದಲ್ಲಿ ಸಾಮಾನ್ಯವಾಗಿ ಅಳವಡಿಸುವ ತೆಳು ಡಾಂಬರ್ (Bituminous) ಪದರದ (ಪ್ರಸ್ತುತ ಪ್ರಕರಣದಲ್ಲಿ 25 ಮಿ.ಮಿ. ಎಸ್.ಡಿ.ಬಿ.ಸಿ.) ಆಯುಷ್ಯವು ಕನಿಷ್ಠ 5 ವರ್ಷವೆಂದು ಪರಿಗಣಿಸಬಹುದು ಎಂದು ತಿಳಿಸಿದ್ದು, ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡು ಒಂದು ವರ್ಷಕ್ಕೆ ಮುಂಚೆಯೇ ಈ ರೀತಿ ಗುಂಡಿಗಳು ಬಿದ್ದಿದ್ದು, ರಸ್ತೆಯ ಹಲವು ಕಡೆ ಕುಸಿದಿರುತ್ತದೆ" ಎಂದು ಹೇಳಿರುತ್ತಾರೆ. ಆದರೆ ಇವರು ತಮ್ಮ ವರದಿಯ 4.04 ರಲ್ಲಿ "ಆದುದರಿಂದ ದೂರುದಾರರು ಮಾಡಿರುವ ಆಪಾದನೆಗಳಾದ, ಕಾಮಗಾರಿಯನ್ನು ಕಳಪೆಯಾಗಿ ನಿರ್ಮಿಸಿರುವುದು ಹಾಗೂ ಹಣ ದುರ್ಬಳಕೆ ಮಾಡಿರುವುದು ಸಾಬೀತಾಗಿರುವುದಿಲ್ಲ ಎಂದು ಅಭಿಪ್ರಾಯಿಸಲಾಗಿದೆ"

ಎಂದು ಹೇಳಿರುತ್ತಾರೆ. ಇವರ ವರದಿಯಲ್ಲಿ ಪಾಯಿಂಟ್ ನಂ.4.02ರಲ್ಲಿ ಬರೆದ ವಿಷಯ ಹಾಗೂ 4.04 ರಲ್ಲಿ ಬಂದ ಅಭಿಪ್ರಾಯವೂ ವ್ಯತಿರಿಕ್ತವಾಗಿರುತ್ತದೆ.

29. ತಮ್ಮ ವರದಿಯ ಜೊತೆಗೆ ಇವರು ಭೇಟಿ ನೀಡಿದಾಗ ಅಗೆದಂತಹ ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು ಇರುತ್ತದೆ. ಅವುಗಳಲ್ಲಿ ಗುಂಡಿಗೆ ಬಿದ್ದ ಸ್ಥಳದ ಛಾಯಾಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೆ ತಮ್ಮ ಮಹಜರಿನಲ್ಲಿ ಕಾಮಗಾರಿಯು ಮೊದಲನೇ ರೀಚ್ ಎಂದರೆ 9.30 ಕಿ.ಮೀ. ನಿಂದ 10.00 ಕಿ.ಮೀ. ವರೆಗಿನ ರಸ್ತೆಯಲ್ಲಿ ಅನೇಕ ಸಣ್ಣ ಗುಂಡಿಗಳಿದ್ದು, ಕಿ.ಮೀ. 9.40, 9.65, 9.75 ಹಾಗೂ 9.85 ಗಳಲ್ಲಿ ಗಣನೀಯವಾಗಿ ರಸ್ತೆಯಲ್ಲಿ ಗುಂಡಿಯಾಗಿರುವುದು ಕಂಡುಬಂದಿರುತ್ತದೆ. ಅಲ್ಲದೇ 9.75 ಕಿ.ಮೀ. ನಲ್ಲಿ ಸಿ.ಡಿ. (ಹಳೆಯದು ಸದರಿ ಕಾಮಗಾರಿಯಲ್ಲಿ ಕೈಗೊಂಡಿಲ್ಲ) ಯು ಮುರಿದಿರುವುದು ಕಂಡು ಬಂದಿರುತ್ತದೆ. ಕಾರಣ ಇವರ ಸಾಕ್ಷ್ಯ, ಮಹಜರ್ ಹಾಗೂ ವರದಿಯನ್ನು ಪರಿಶೀಲಿಸಿದಾಗ ಇವುಗಳಲ್ಲಿ ವಿರೋಧಾಬಸಗಳು ಇರುವುದರಿಂದ ಸಂಪೂರ್ಣವಾಗಿ ಒಪ್ಪಕೊಳ್ಳಲು ಸಾಧ್ಯವಿರುವುದಿಲ್ಲ.

30. ಎದುರುದಾರರ ಪ್ರಕಾರ ರಸ್ತೆಯ ಮೇಲೆ ಭಾರಿ ವಾಹನಗಳು ಓಡಾಡಿದ್ದರಿಂದ ಈ ರೀತಿ ಆಗುತ್ತದೆ ಅನ್ನುವುದು ಒಪ್ಪಿಕೊಳ್ಳಲು ಬರುವುದಿಲ್ಲ.

31. ಎದುರುದಾರರ ಪ್ರಕಾರ ಅಂದರೆ ಡಿ.ಡಬ್ಲ್ಯೂ-1 ರವರ ಮುಖ್ಯ ವಿಚಾರಣೆಯ ಪ್ಯಾರಾ ನಂ.5ರಲ್ಲಿ ನಬಾರ್ಡ್ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳಿಗೆ ನಿರ್ವಹಣಾ ಅವಧಿ 2 ವರ್ಷದ್ದಾಗಿರುತ್ತದೆ. ಸದರಿ ಅವಧಿಯಲ್ಲಿ ಏನಾದರೂ ನ್ಯೂನ್ಯತೆ ಕಂಡುಬಂದಲ್ಲಿ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ. ಅದರಂತೆ ಸದರಿ ಗುತ್ತಿಗೆದಾರರಿಗೆ ದಿನಾಂಕ: 31.12.2016 ಮತ್ತು ದಿನಾಂಕ: 20.01.2017 ರಂದು ನೋಟಿಸ್ಸು ನೀಡುವುದರ ಮುಖಾಂತರ ಕೆಲಭಾಗಗಳಲ್ಲಿ ಕಂಡುಬಂದ ನ್ಯೂನ್ಯತೆಗಳನ್ನು ಗುತ್ತಿಗೆದಾರರಿಂದಲೇ ಫೆಬ್ರವರಿ-2017ರಲ್ಲಿ ಸರಿಪಡಿಸಲಾಗಿದೆ ಎಂದು ನುಡಿದಿರುತ್ತಾರೆ. ಅದಕ್ಕೆ ಸಂಬಂಧಿಸಿದ ದೃಢೀಕರಿಸಿದ ಭಾವಚಿತ್ರಗಳನ್ನು ಸಲ್ಲಿಸಲಾಗಿದೆ. ಆದರೆ, ತನಿಖಾಧಿಕಾರಿಗಳು ದಿನಾಂಕ: 18.01.2017ರಂದು ಭೇಟಿ ನೀಡಿದಾಗ ಆಗ ಇದ್ದ ಗುಂಡಿಗಳನ್ನು ಮತ್ತು ಪ್ಯಾಚ್‌ವರ್ಕ್‌ಗಳನ್ನು ಫೆಬ್ರವರಿ-2017ರಲ್ಲಿ ಮಾಡಿರುತ್ತಾರೆ ಅಂತಾ

ಕಂಡುಬರುತ್ತದೆ. ಫೆಬ್ರವರಿ–2017ರಲ್ಲಿ ಮಾಡಿದ ಪ್ಯಾಚ್‌ವರ್ಕ್ ಛಾಯಾಚಿತ್ರಗಳನ್ನು ನಿ.ಡಿ.7ರ ಪ್ರಕಾರ ಸಲ್ಲಿಸಿರುತ್ತಾರೆ. ಕರಾರು ಒಪ್ಪಂದ ಪತ್ರವನ್ನು ದಾಖಲಿಸಿದ್ದು, ನಿ.ಡಿ.8 ರಂದು ಗುರುತಿಸಲಾಗಿದೆ. ನಿ.ಡಿ.8 ಇದರಲ್ಲಿ ಕಾಮಗಾರಿಯ ಬಗ್ಗೆ ಏನಾದರೂ ನ್ಯೂನತೆಗಳು ಇದ್ದರೆ ಗುತ್ತಿಗೆದಾರರು ಸರಿಪಡಿಸಿಬೇಕಾಗುತ್ತದೆ ಅಂತಾ ನಮೂದು ಇರುತ್ತದೆ. ಆದರೆ ನಿಖರವಾಗಿ ಕಾಮಗಾರಿಯಾಗಿ 2 ವರ್ಷದಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದರೆ ಗುತ್ತಿಗೆದಾರರು ಸರಿಪಡಿಸಬೇಕಾಗುತ್ತದೆ ಅಂತಾ ನಮೂದು ಇರುವುದಿಲ್ಲ. ಡಿ.ಡಬ್ಲ್ಯೂ–1 ರವರು ಗುತ್ತಿಗೆದಾರರಿಗೆ ಪ್ಯಾಚ್ ವರ್ಕ್‌ದ ಬಗ್ಗೆ ಎರಡು ನೋಟೀಸಗಳನ್ನು ಕಳುಹಿಸಿದ್ದು, ನಿ.ಡಿ.5 ಮತ್ತು ನಿ.ಡಿ.6 ರಂತೆ ಕಂಡುಬರುತ್ತದೆ. ಇವುಗಳನ್ನು ದಿನಾಂಕ: 31.12.2016 ಹಾಗೂ ದಿನಾಂಕ: 20.01.2017 ರಂದು ಕಳುಹಿಸಿದ್ದು ಇರುತ್ತದೆ. ಡಿ.ಡಬ್ಲ್ಯೂ–1 ರವರು ಸದರಿ ಪತ್ರಗಳಲ್ಲಿ "ಈ ಕಾಮಗಾರಿಯ 2 ವರ್ಷಗಳ ನಿರ್ವಹಣಾ ಅವಧಿ ಇರುತ್ತದೆ. ಈ ಸಾಲಿನಲ್ಲಿ ಬಿದ್ದ ಮಳೆಯಿಂದ ಕಾಮಗಾರಿಯು ಕಿ.ಮೀ. 9.30 ರಿಂದ 11.00 ಮತ್ತು ಕಿ.ಮೀ. 11.90 ರಿಂದ 13.70 ವ್ಯಾಪ್ತಿಯ ಭಾಗಗಳಲ್ಲಿ ರಸ್ತೆಯು ಹಾಳಾಗಿದ್ದು, ಅದನ್ನು ಪ್ಯಾಚ್‌ವರ್ಕ್‌ಗಳ ಮೂಲಕ ಸರಿಪಡಿಸಲು ಕೇಳಿಕೊಳ್ಳಲಾಗಿರುತ್ತದೆ". ಈ ನೋಟಿಸಿನ ಪ್ರಕಾರ ಗುತ್ತಿಗೆದಾರರೇ ಪ್ಯಾಚ್‌ವರ್ಕ್ ಕೈಗೊಂಡಿರುತ್ತಾರೆ ಅನ್ನುವ ಬಗ್ಗೆ ಯಾವ ಛಾಯಾಚಿತ್ರಗಳನ್ನಾಗಲೀ ಅಥವಾ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. (ಪ್ಯಾಚ್‌ವರ್ಕ್ ಮಾಡಿದ ಬಗ್ಗೆ ಛಾಯಾಚಿತ್ರಗಳನ್ನು (ನಿ.ಡಿ.7) ಗಳನ್ನು ಹಾಜರುಪಡಿಸಿದ್ದು, ಇದರಲ್ಲಿ ದಿನಾಂಕ ನಮೂದು ಇರುವುದಿಲ್ಲ.) ಮೇಲಾಗಿ ತನಿಖಾಧಿಕಾರಿಗಳು ದಿನಾಂಕ: 18.01.2017ರಂದು ಸ್ಥಳ ಭೇಟಿ ನೀಡಿದಾಗ, ಭಾರಿ ಪ್ರಮಾಣದ ಮಳೆಯಿಂದಾಗಿ ರಸ್ತೆಗಳು ಹಾಳಾಗಿರುತ್ತವೆ ಅನ್ನುವ ವಿಷಯವನ್ನು ಅವರ ಗಮನಕ್ಕೆ ತಂದಿರುವುದಿಲ್ಲ. ತನಿಖಾಧಿಕಾರಿಗಳನ್ನು ತಮ್ಮ ವರದಿಯಲ್ಲಿ 3–06ರಲ್ಲಿ ಗುಂಡಿಗಳನ್ನು ಮುಚ್ಚಲು ಗುತ್ತಿಗೆದಾರರಿಗೆ 2 ನೋಟೀಸಗಳನ್ನು ನೀಡಲಾಗಿದೆ ಎಂದು ನಮೂದು ಇರುತ್ತದೆ. ಆದರೆ ನಿ.ಡಿ.5 ಮತ್ತು ನಿ.ಡಿ6 ರನ್ನು ನೋಡಲಾಗಿ ನಿ.ಡಿ.6ರನ್ನು ದಿನಾಂಕ: 20.01.2017ರಂದು ಕೊಡಲಾಗಿದೆ, ಅಂದರೆ, ತನಿಖಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಎರಡು ದಿನಗಳ ನಂತರ ಕೊಡಲಾಗಿದೆ. ಆದ್ದರಿಂದ, ತನಿಖಾಧಿಕಾರಿಗಳು ಭೇಟಿಯಾದಾಗ ಎರಡನೇಯ ನೋಟೀಸನ್ನು ಕೊಡಲಾಗಿರುತ್ತದೆ ಎಂದು ಹೇಳಿರುವುದು ಸರಿಯಾಗಿರುವುದಿಲ್ಲ. ಅಲ್ಲದೆ, ತಮ್ಮ ವರದಿಯಲ್ಲಿ ಗುತ್ತಿಗೆದಾರರು

ಪ್ಯಾಚ್‌ವರ್ಕ್‌ಗಾಗಿ 8.50 ಲಕ್ಷ ತಡೆಹಿಡಿಯಲಾಗಿತ್ತು ಎಂದು ಹೇಳಿದ್ದು, ಆದರೆ, ಯಾವ ದಾಖಲೆಯನ್ನು ನೋಡಿರುತ್ತಾರೆ ಅಂತಾ ತಿಳಿದು ಬಂದಿರುವುದಿಲ್ಲ.

32. ಎದುರುದಾರರ ಪ್ರಕಾರ ದೂರುದಾರರು ಈ ದೂರನ್ನು ಸಲ್ಲಿಸಿದ ನಂತರ, ಈ ಸಂಸ್ಥೆಗೆ ಒಂದು ಪತ್ರವನ್ನು ಬರೆದಿದ್ದು, ಅದರಲ್ಲಿ ತಾನು ಮಾಡಿದ ದೂರನ್ನು ಹಿಂಪಡೆಯುತ್ತಾನೆ ಅಂತಾ ಕಳುಹಿಸಿರುತ್ತಾನೆ ಹಾಗೂ ಅದರ ಪ್ರತಿಯನ್ನು ಆ.ಸ.ನೌ ಇವರಿಗೆ ಕಳುಹಿಸಿಕೊಟ್ಟಿರುತ್ತಾನೆ ಅಂತಾ ಹೇಳಿದ್ದು, ಸದರಿ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿ.ಡಿ.1 ಎಂದು ಗುರುತಿಸಲಾಗಿದೆ. ನಿ.ಡಿ.1 ರ ಪ್ರಕಾರ ದೂರುದಾರರನ್ನು ಈ ಸಂಸ್ತೆಗೆ ದಿನಾಂಕ: 18.05.2015 ರಂದು ಪತ್ರ ಬರೆದು ಕಾಮಗಾರಿಯ ತೃಪ್ತಿಕರವಾಗಿರುತ್ತದೆ ಅದನ್ನು ತಾನು ಹಿಂದಕ್ಕೆ ಪಡೆಯುತ್ತೇನೆ ಎಂದು ಹೇಳಿರುತ್ತಾರೆ. ದೂರುದಾರರು ದಿನಾಂಕ: 24.02.2015 ರಂದು ದೂರು ಸಲ್ಲಿಸಿದ್ದು ಅದನ್ನು ಹಿಂಪಡೆಯಲು ಪತ್ರವನ್ನು ದಿನಾಂಕ: 18.05.2015 ರಂದು ಇರುತ್ತದೆ. ಆದರೆ, ಎದುರುದಾರರ ಪ್ರಕಾರ ಕಾಮಗಾರಿಯು ದಿನಾಂಕ: 20.05.2015 ರಂದು ಮುಗಿದಿರುತ್ತದೆ. ಅಂದರೆ ಕಾಮಗಾರಿಯನ್ನು ಪೂರ್ಣಗೊಳ್ಳುವ ಮೊದಲೇ ದೂರುದಾರರು ತನಗೆ ಕಾಮಗಾರಿಯ ಬಗ್ಗೆ ತೃಪ್ತಿವ್ಯಕ್ತಪಡಿಸುವುದು ನೋಡಿದರೆ ನಿ.ಡಿ.1 ಬಗ್ಗೆ ಸಂಶಯವಾಗುತ್ತದೆ. ದೂರುದಾರರು ಈ ದಾಖಲೆಯ ಬಗ್ಗೆ ತನ್ನ ಪಾಟಿ ಸವಾಲಿನಲ್ಲಿ ಒಪ್ಪಿಕೊಂಡಿದ್ದರೂ ಸಹ ತನ್ನ ಮುಖ್ಯ ವಿಚಾರಣೆಯಲ್ಲಿ ದೂರಿನಂತೆ ಸಾಕ್ಷಿಯನ್ನು ನುಡಿಯುತ್ತಿರಲಿಲ್ಲ ಅಂತ ಅಭಿಪ್ರಾಯ ಪಡಬಹುದಾಗಿದೆ. ಇದಲ್ಲದೆ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಾಗಲೀ ಅಥವಾ ತಮ್ಮ ಲಿಖಿತ ಹೇಳಿಕೆಯಲ್ಲಾಗಲೀ, ನಿ.ಡಿ.1ರ ಬಗ್ಗೆ ಎಲ್ಲಿಯೂ ಮಾಹಿತಿಯನ್ನು ನೀಡಿರುವುದಿಲ್ಲ. ಅಲ್ಲದೇ, ತನಿಖಾಧಿಕಾರಿಗಳು (ಪಿ.ಡಬ್ಲ್ಯೂ.2) ರವರು ತಮ್ಮ ಸಾಕ್ಷಿಯಲ್ಲಿ ಅಳತೆ ಪುಸ್ತಕದ ಪ್ರತಿಗಳನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.9 (20 ಪುಟಗಳು) ಎಂದು ಗುರುತಿಸಲಾಯಿದ್ದು, ಅದರಲ್ಲಿ ಪುಟ ನಂ.45ರಲ್ಲಿ RA Bill 3rd and part ಅಳತೆಯನ್ನು ದಾಖಲು ಮಾಡಿದ ದಿನಾಂಕ ನಮೂದು ಮಾಡಿರುವುದಿಲ್ಲ. ಅದೇ ರೀತಿ, ಪುಟ ನಂ.49ರಲ್ಲಿ RA Bill 4th and part ಅಳತೆಯನ್ನು ದಾಖಲು ಮಾಡಿದ ದಿನಾಂಕ ನಮೂದು ಮಾಡಿರುವುದಿಲ್ಲ. ಈ ಬಗ್ಗೆ ಆ.ಸ.ನೌ ರವರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.

33. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಆ.ಸ.ನೌಕರರಾದ (1) **ಶ್ರೀ. ಅಣ್ಣಪ್ಪ ಕುದರಿ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಉಪವಿಭಾಗ, ಅಫಜಲ್‌ಪುರ, ಕಲಬುರಗಿ ಜಿಲ್ಲೆ ಮತ್ತು (2) **ಶ್ರೀ. ಶ್ಯಾಮಸುಂದರ್ ಸರನದ,** ಕಿರಿಯ ಅಭಿಯಂತರರು, ಲೋಕೋಪಯೋಗಿ, ಉಪವಿಭಾಗ, ಅಫಜಲ್‌ಪುರ, ಕಲಬುರಗಿ ಜಿಲ್ಲೆ ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ **ಸಫಲವಾಗಿರುತ್ತದೆ** ಎಂದು ನಿರ್ಣಯಿಸಲಾಗಿದೆ.

ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 31/07/2023 ಮತ್ತು ಆ.ಸ.ನೌ–2 ರವರ ನಿವೃತ್ತಿ ದಿನಾಂಕ: 31/07/2028 ಆಗಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

29/11

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Santhosh Doddamani S/o Tukaram, Nandarga, Afzalpura, Kalaburgi. |
| | **PW-2** | Sri. H.N Srinivas Murthy S/o Nagaraj Bhagavathar K.S, Retired Engineer, Bengaluru. |
| 2 | **Documents marked on behalf of the Disciplinary Authority Ex.P-1 to Ex.P-10** | |
| | **Ex.P.1 & 1(a)** | Complaint given to this institution dtd: 24/02/2015 with Signature. |
| | **Ex.P.2 & 2(a)** | Form No.1 with Signature. |
| | **Ex.P.3 & 3(a)** | Form No.2 with Signature (Affidavit). |
| | **Ex.P.4** | Photographs. |
| | **Ex.P.5& 5(a)** | Investigation Report with Signature. |
| | **Ex.P.6** | Spot Mahazar. |
| | **Ex.P.7** | Photographs. |
| | **Ex.P.8** | Work Estimation details. |
| | **Ex.P.9** | M.B Book. |
| | **Ex.P. 10** | Quality Assurance Report submitted by AEE, PWD, Kalaburgi. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Shyamasundar Saranada S/o Narayana Rao, Junior Engineer, Health & Family Welfare Department, Engineering Division, Kalaburgi. |

| 4 | Documents marked on behalf of the DGO through the complainant | |
|---|---|---|
| | **Ex.D.1** | Letter given by the complainant to this institution. |
| | **Ex.D.2** | Letter given by the complainant to this institution with photographs. |
| | **Ex.D.3** | Quality Assurance Report submitted by AEE, PWD, Kalaburgi. |
| | **Ex.D.4** | Project Completion Report dtd: 30/07/2015 submitted by EE, PWD, Kalaburgi with enclosures. |
| | **Ex.D.5** | Letter of AEE, PWD, Afzalpura given to Contractor dtd: 31/12/2016. |
| | **Ex.D.6** | Letter of AEE, PWD, Afzalpura given to Contractor dtd: 20/01/2017. |
| | **Ex.D.7** | Photographs. |
| | **Ex.D.8** | Contract Agreement with enclosures. |

Dated this the 29th November, 2021

Baradeshi 29/11

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.